**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

1149370

**2017**

**ಪ್ರಶ್ನೆ ಪುಸ್ತಿಕೆ**

**ಸಾಮಾನ್ಯ ಜ್ಞಾನ**

**ಪ್ರಶ್ನೆ ಪುಸ್ತಿಕೆ ಶ್ರೇಣಿ**

**B**

**ಸಮಯ : 2 ಗಂಟೆಗಳು** | **ವಿಷಯ ಸಂಕೇತ : 177** | **ಗರಿಷ್ಠ ಅಂಕಗಳು : 150**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| **ನೋಂದಣಿ ಸಂಖ್ಯೆ** |
|---|
| |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.**

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

1. ಲೋದಿ ರಾಜವಂಶ ಸ್ಥಾಪಕ ಯಾರು ?

(1) ನಿಜಾಮ ಷಾ ಲೋದಿ

(2) ಸಿಕಂದರ ಲೋದಿ

(3) ಬಹ್ಲುಲ್ ಲೋದಿ

(4) ಇಬ್ರಾಹಿಂ ಲೋದಿ

2. ಉಪ-ರಾಷ್ಟ್ರಪತಿಗಳನ್ನು ತೆಗೆದು ಹಾಕುವ ನಿರ್ಣಯದ ಪ್ರಸ್ತಾಪ ವಾಗುವುದು ಇಲ್ಲಿ

(1) ಲೋಕ ಸಭೆ ಮಾತ್ರ

(2) ರಾಜ್ಯ ಸಭೆ ಮಾತ್ರ

(3) ಪಾರ್ಲಿಮೆಂಟ್‌ನ ಜಂಟಿ ಸಭೆ

(4) ಪಾರ್ಲಿಮೆಂಟ್‌ದ ಯಾವುದೇ ಸದನ

3. ರಾಜರ ದೈವಿಕತೆ ಸಿದ್ಧಾಂತವನ್ನು ಮಂಡಿಸಿದ ಮೊದಲ ಸುಲ್ತಾನ ಯಾರು ?

(1) ಅಲ್ಲಾವುದ್ದೀನ್ ಖಿಲ್ಜಿ

(2) ಇಲ್ತುತಮಿಷ್

(3) ಬಲ್‌ಬನ್

(4) ಕುತ್ಬುದ್ದೀನ ಐಬಕ್

4. ಪಾರ್ಲಿಮೆಂಟಿನ ಎರಡೂ ಸಭೆಗಳ ವ್ಯವಹಾರಗಳಲ್ಲಿ ಯಾವ ಸದಸ್ಯೇತರರು ಭಾಗವಹಿಸಬಹುದು ?

(1) ಉಪ-ರಾಷ್ಟ್ರಪತಿಗಳು

(2) ಸಾಲಿಸಿಟರ್ ಜನರಲ್

(3) ಅಟಾರ್ನಿ ಜನರಲ್

(4) ಭಾರತದ ಮುಖ್ಯ ನ್ಯಾಯಾಧೀಶರು

5. ಪಟ್ಟಿ I (ದೇಶ) ಮತ್ತು ಪಟ್ಟಿ II (ರಾಜಧಾನಿ) ಹೊಂದಿಸಿರಿ :

| *ಪಟ್ಟಿ I* *(ದೇಶ)* | *ಪಟ್ಟಿ II* *(ರಾಜಧಾನಿ)* |
|---|---|
| A. ಆಸ್ಟ್ರಿಯಾ | I. ಹವಾನಾ |
| B. ಬ್ರೆಜಿಲ್ | II. ವಿಯೆನ್ನಾ |
| C. ಮೆಕ್ಸಿಕೋ | III. ಬ್ರಜಿಲಿಯಾ |
| D. ಕ್ಯೂಬಾ | IV. ಮೆಕ್ಸಿಕೋ ನಗರ |
| | V. ಬ್ರುಸೆಲ್ಸ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | III | IV | I |
| (2) | I | V | IV | II |
| (3) | I | V | IV | III |
| (4) | V | II | III | I |

6. ಒಂದು ಮಸೂದೆಯನ್ನು ಪಾರ್ಲಿಮೆಂಟಿನ ಜಂಟಿಸದನಗಳ ಮುಂದೆ ಇಟ್ಟಾಗ ಅದರ ಅನುಮೋದನೆ ಇವರಿಂದ ಆಗಬೇಕು

(1) ಹಾಜರಿರುವ ಸದಸ್ಯರ ಸರಳ ಬಹುಮತದಿಂದ ಮತ್ತು ಮತದಾನದ ಮೂಲಕ

(2) ಹಾಜರಿರುವ ಸದಸ್ಯರ 3/4 ಭಾಗದ ಬಹುಮತದಿಂದ ಮತ್ತು ಮತದಾನದ ಮೂಲಕ

(3) ಸದನಗಳಲ್ಲಿನ 2/3 ಬಹುಮತದಿಂದ

(4) ಸದನಗಳಲ್ಲಿನ ಪೂರ್ಣ ಬಹುಮತದಿಂದ

www.shikarat.com

7. ಪಟ್ಟಿ I (ಪೋಷಕಾಂಶಗಳು) ಮತ್ತು ಪಟ್ಟಿ II (ಕೊರತೆಯ ಲಕ್ಷಣಗಳು) ಹೊಂದಿಸಿರಿ :

| *ಪಟ್ಟಿ I* (ಪೋಷಕಾಂಶಗಳು) | *ಪಟ್ಟಿ II* (ಕೊರತೆಯ ಲಕ್ಷಣಗಳು) |
|---|---|
| A. ಕ್ಯಾಲ್ಸಿಯಮ್ | I. ನಿರ್ಜಲೀಕರಣ |
| B. ಸೋಡಿಯಮ್ | II. ರಿಕೆಟ್ಸ್ |
| C. ಕಬ್ಬಿಣ | III. ಗಾಯ್ಟರ್ |
| D. ಅಯೋಡಿನ್ | IV. ಅನೀಮಿಯಾ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | IV | III |
| (3) | IV | III | II | I |
| (4) | III | IV | I | II |

8. ಕೆಳಗಿನವುಗಳಲ್ಲಿ ಯಾವುದು ಹೆಚ್ಚಿನ ಸಂವಿಧಾನಾತ್ಮಕ ಕಾಯವಾಗಿದೆ ?

(1) ಕೇಂದ್ರ ಲೋಕ ಸೇವಾ ಆಯೋಗ

(2) ಹಣಕಾಸು ಆಯೋಗ

(3) ಚುನಾವಣಾ ಆಯೋಗ

(4) ನೀತಿ ಆಯೋಗ

9. ಈ ಕೆಳಗಿನ ಕಾಯಿಲೆಗಳನ್ನು ಪರಿಗಣಿಸಿ :

A. ಕಾಲರಾ

B. ಕ್ಷಯ

C. ಫಿಲೇರಿಯಾ

D. ಟೈಫಾಯಡ್

ಈ ಮೇಲಿನ ಕಾಯಿಲೆಗಳ ಪೈಕಿ ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆ ಯಾವುದು ?

(1) A ಮತ್ತು C ಮಾತ್ರ

(2) B ಮತ್ತು D ಮಾತ್ರ

(3) A, C ಮತ್ತು D ಮಾತ್ರ

(4) A, B ಮತ್ತು D ಮಾತ್ರ

10. ಈ ಕೆಳಗಿನ ಹೇಳಿಕೆಗಳ ಪೈಕಿ ಯಾವ ಹೇಳಿಕೆ ಸರಿ ?

(1) ಪ್ರಧಾನ ಮಂತ್ರಿಯವರು ತಮ್ಮ ಸಂಪುಟ ಸಚಿವರನ್ನು ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಯಾವುದಾದರೂ ಒಂದು ಸದನದಿಂದ ಮಾತ್ರ ಆರಿಸುತ್ತಾರೆ.

(2) ಪ್ರಧಾನ ಮಂತ್ರಿಯವರು ತಮ್ಮ ಸಂಪುಟದ ಸದಸ್ಯರನ್ನು ಭಾರತದ ರಾಷ್ಟ್ರಪತಿಯೊಂದಿಗೆ ಸಮಾಲೋಚಿಸಿ ಆರಿಸುವರು.

(3) ಪ್ರಧಾನ ಮಂತ್ರಿಯವರಿಗೆ ತಮ್ಮ ಸಂಪುಟದ ಸದಸ್ಯರನ್ನು ಆಯ್ಕೆಮಾಡುವ ಪೂರ್ಣ ವಿವೇಚನಾ ಸ್ವಾತಂತ್ರ್ಯ ಇದೆ.

(4) ಪ್ರಧಾನ ಮಂತ್ರಿಯವರಿಗೆ ತಮ್ಮ ಸಂಪುಟ ಸಹೋದ್ಯೋಗಿಗಳನ್ನು ಆಯ್ಕೆ ಮಾಡಲು ಸೀಮಿತ ಸ್ವಾತಂತ್ರ್ಯ ವಿರುವುದು ಏಕೆಂದರೆ ಈ ವಿವೇಚನಾ ಅಧಿಕಾರವು ರಾಷ್ಟ್ರಪತಿಗಳಿಗೆ ಇರುವುದು.

www.shikarat.com

11. ಪಟ್ಟಿ I (ನಗರಗಳೊಂದಿಗೆ) ಮತ್ತು ಪಟ್ಟಿ II (ನದಿಗಳು) ನೆಲೆಯಾಗಿರುವ ಸ್ಥಳಗಳೊಂದಿಗೆ ಹೊಂದಿಸಿರಿ :

| ಪಟ್ಟಿ I (ನಗರಗಳು) | ಪಟ್ಟಿ II (ನದಿಗಳು) |
|---|---|
| A. ಲಂಡನ್ | I. ಟೈಗ್ರಿಸ್ |
| B. ಬಾಗ್ದಾದ್ | II. ಥೇಮ್ಸ್ |
| C. ಕೈರೋ | III. ಸೈನ್ |
| D. ಪ್ಯಾರಿಸ್ | IV. ನೈಲ್ |
| | V. ಟೈಬರ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | IV | III |
| (3) | II | V | III | IV |
| (4) | I | V | IV | III |

12. ಈ ಕೆಳಗಿನ ಆಹಾರ ಸಾಮಗ್ರಿಗಳನ್ನು ಪರಿಗಣಿಸಿ :

A. ಗಿಣ್ಣು

B. ಸಕ್ಕರೆ

C. ವಿನಿಗರ್

ಮೇಲಿನ 3 ಆಹಾರ ಸಾಮಗ್ರಿಗಳಲ್ಲಿ ಹುದುಗುವಿಕೆಯ ತಂತ್ರಜ್ಞಾನದಿಂದ ಪಡೆಯುವಂತಹವುಗಳೆಂದರೆ :

(1) A ಮತ್ತು C ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, B ಮತ್ತು C

13. ಈ ಬೆಳೆಗಳನ್ನು ಪರಿಗಣಿಸಿ :

A. ಹತ್ತಿ

B. ಕಡಲೇಕಾಯಿ

C. ಅಕ್ಕಿ

D. ಗೋಧಿ

ಮೇಲಿನ ಯಾವ ಬೆಳೆಗಳು ಖಾರಿಫ್ ಬೆಳೆಗಳು ?

ನೀಡಿರುವ ಆಯ್ಕೆಗಳಲ್ಲಿ ಸರಿ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು D ಮಾತ್ರ

(2) B ಮತ್ತು C ಮಾತ್ರ

(3) A, B ಮತ್ತು C ಮಾತ್ರ

(4) B, C ಮತ್ತು D ಮಾತ್ರ

14. ಈ ಹೇಳಿಕೆಗಳನ್ನು ಗಮನಿಸಿ :

A. ಮೂಲಭೂತ ಹಕ್ಕುಗಳು ಸಮರ್ಥನೀಯ.

B. ಮೂಲಭೂತ ಕರ್ತವ್ಯಗಳು ಸಮರ್ಥನೀಯ ಅಲ್ಲ.

ಮೇಲಿನ ಯಾವ ಹೇಳಿಕೆ / ಗಳು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಆಗಲೀ B ಆಗಲೀ ಅಲ್ಲ

15. ಇನ್‌ಸುಲಿನ್ ನಿಯಂತ್ರಿಸುವುದು

(1) ಥೈರಾಯ್ಡ್‌ನಲ್ಲಿ ಅಯೊಡಿನ್ ಮಟ್ಟ

(2) ರಕ್ತದಲ್ಲಿನ ಕಬ್ಬಿಣದ ಮಟ್ಟ

(3) ರಕ್ತದಲ್ಲಿನ ಸಕ್ಕರೆಯ ಮಟ್ಟ

(4) ರಕ್ತದಲ್ಲಿನ ಯೂರಿಯಾ ಮಟ್ಟ

www.shikarat.com

16. ಭಾರತ ರಾಷ್ಟ್ರೀಯ ಚಳುವಳಿಯನ್ನು ಬಲಪಡಿಸಲು ತೆಗೆದುಕೊಂಡ ಪ್ರಮುಖ ಕ್ರಮಗಳು ಮತ್ತು ಅದರ ನೇತಾರರನ್ನು ಇಲ್ಲಿ ನೀಡಲಾಗಿದೆ :

A. ದಂಡಿ ಯಾತ್ರೆ : ಮಹಾತ್ಮಾ ಗಾಂಧಿ

B. ಲಾಹೋರ್ ಕಾಂಗ್ರೆಸ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ನಿರ್ಣಯ : ಜವಹರಲಾಲ್ ನೆಹರೂ

C. ಬಾರ್ಡೋಲಿ ಆಂದೋಳನ : ಅಬ್ದುಲ್ ಗಫಾರ್ ಖಾನ್

D. ಕೆಂಪು ಅಂಗಿ ಚಳುವಳಿ : ಸರ್ದಾರ್ ಪಟೇಲ್

ಈ ಮೇಲಿನ ಜೋಡಿಗಳ ಪೈಕಿ ಯಾವುವು/ದು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) A ಮಾತ್ರ B ಮಾತ್ರ

(3) C ಮಾತ್ರ

(4) A, B ಮತ್ತು D ಮಾತ್ರ

17. ಈ ಹೇಳಿಕೆಗಳನ್ನು ಗಮನಿಸಿ :

A. ನಾವುಯಾವಾಗಲೂ ಚಂದ್ರನ ಒಂದೇ ಮಗ್ಗುಲನ್ನು ನೋಡುತ್ತೇವೆ.

B. ಚಂದ್ರನು ತನ್ನ ಅಕ್ಷದ ಸುತ್ತ ಸುತ್ತುವ ಅವಧಿ ಮತ್ತು ಚಂದ್ರನು ಮೇಲೆ ಸುತ್ತುವ ಅವಧಿ ಎರಡೂಸಮ.

ಈ ಹೇಳಿಕೆಗಳ ಪೈಕಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಎರಡೂ

(2) A ಮಾತ್ರ

(3) B ಮಾತ್ರ

(4) A ಯಾಗಲೀ ಅಥವಾ B ಯಾಗಲೀ ಎರಡೂ ಅಲ್ಲ

18. ಕ್ಯಾನ್ಸರ್‌ನ ಅದ್ಭುತ ಪ್ರಖ್ಯಾತ ಔಷಧಿಯಾದ "ಟಾಕ್ಸಾಲ್" ಅನ್ನು ಈ ಕೆಳಗಿನ ಯಾವುದರಿಂದ ಪಡೆಯುತ್ತಾರೆ ?

(1) ಬೇವು

(2) ಯೂ

(3) ತುಳಸಿ

(4) ಅರಳಿ

19. ತ್ರಿಪುರಾ ಅಧಿವೇಶನ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (1939 ಮಾರ್ಚ್) ನಡೆದಾಗ ಸುಭಾಷ್ ಚಂದ್ರ ಬೋಸ್ ಅವರು ಮಹಾತ್ಮಾ ಗಾಂಧಿಯವರು ಅಧ್ಯಕ್ಷಗಿರಿಗಾಗಿ ಬೆಂಬಲಿಸಿದ ಅಭ್ಯರ್ಥಿಯನ್ನು ಸೋಲಿಸಿದರು. ಆ ಸೋತ ಅಭ್ಯರ್ಥಿಯಾರು ?

(1) ಅಬ್ದುಲ್ ಕಲಾಮ್ ಅಜಾದ್

(2) ಸಿ. ರಾಜಗೋಪಾಲಾಚಾರಿ

(3) ಪಟ್ಟಾಭಿ ಸೀತಾರಾಮಯ್ಯ

(4) ವಲ್ಲಭ್‌ಭಾಯ್ ಪಟೇಲ್

20. 1928 ರಲ್ಲಿ ಭಗತ್ ಸಿಂಗ್ ಮತ್ತು ರಾಜಗುರು, ಒಬ್ಬ ಪೋಲೀಸ್ ಅಧಿಕಾರಿಯನ್ನು ಕೊಂದಿದ್ದು ಅವರು ಈ ಅಕೃತ್ಯ ವೆಸಗಿದರೆಂದು ಭಾವಿಸಿ

(1) ಜಲಿಯನ್ ವಾಲಾ ಬಾಗ್ ಕಗ್ಗೊಲಿಗೆ ಆದೇಶಿಸಿದ್ದಾರೆಂದು

(2) ಸಾರ್ವಜನಿಕ ಸುರಕ್ಷತಾ ಮಸೂದೆ ಮಂಡನೆಯನ್ನು ಪರಿಚಯಿಸಿದ್ದಾರೆಂದು

(3) ಲಾಠಿಚಾರ್ಜ್‌ಗಾಗಿ ಆದೇಶಿಸಿದ್ದು, ಅದರಲ್ಲಿ ಲಾಲಾ ಲಜಪತ್ ರಾಯರವರು ಗಾಯಗೊಂಡಿದ್ದು ಮತ್ತು 2 ವಾರಗಳ ನಂತರ ಮರಣ ಹೊಂದಿದರೆಂದು

(4) ರಾಮ್ ಪ್ರಸಾದ್ ಬಿಸ್ಮಿಲ್‌ರನ್ನು ನೇಣಿಗೇರಿಸಲು ಆದೇಶ ನೀಡಿದ್ದಾರೆಂದು

www.shikarat.com

21. ಆಮಿನೋಸೆಂಟಿಸಿಸ್ ಎಂಬ ತಂತ್ರದಿಂದ ಇದನ್ನು ನಿರ್ಧರಿಸಬಹುದು

(1) ಭ್ರೂಣ ಲಿಂಗ
(2) ಅಮಿನೋ ಆಮ್ಲಗಳ ಬಗೆ
(3) ಪ್ರೋಟಿನ್‌ನ ಅಮಿನೋ ಆಮ್ಲಗಳಸರಣಿ
(4) ಹಾರ್ಮೋನುಗಳ ಬಗೆ

22. ಯಾವ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಮೂಲಭೂತ ಹಕ್ಕು ಹಾಗೂ ನಿರ್ದೇಶನ ತತ್ತ್ವಗಳು ಪರಿಸ್ಪರ ಪೂರಕವೆಂದೂ ಯಾವುದನ್ನೂ ಒಂದರಸಲುವಾಗಿ ಇನ್ನೊಂದನ್ನು ತ್ಯಜಿಸಬೇಕಾಗಿಲ್ಲವೆಂದು ಹೇಳಿದೆ

(1) ಗೋಲಕ್‌ನಾಥ್ ಪ್ರಕರಣ
(2) ಕೇಶವಾನಂದ ಭಾರತಿ ಪ್ರಕರಣ
(3) ಮಿನರ್ವಾ ಮಿಲ್ಸ್ ಪ್ರಕರಣ
(4) ಈ ಮೇಲಿನ ಎಲ್ಲವೂ

23. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಪ್ರತಿಪಾದನೆ *(A)* :
ದಖ್ಖನ ಪ್ರಸ್ಥಭೂಮಿಯ ಮೇಲೆ ಪೂರ್ವಕ್ಕೆ ಹರಿಯುವ ನದಿಗಳಲ್ಲಿ ಬಹಳಷ್ಟು ನದಿಗಳು ಮುಖಜಭೂಮಿಯನ್ನು ಹೊಂದಿವೆ.

ಕಾರಣ *(R)* :
ಈ ನದಿಗಳ ಓಟದ ಗತಿಯು ದಖ್ಖನ ಪ್ರಸ್ಥಭೂಮಿಯ ಮೃದು ಬಂಡೆಗಳ ಮುಖಾಂತರ ಆಗಿದೆ.
ಸರಿಯಾದ ಉತ್ತರಗಳನ್ನು ಆರಿಸಿ :

(1) (A) ಮತ್ತು (R) ಎರಡೂ ಸರಿ ಆದರೆ (R) ವು (A) ಯ ಸರಿಯಾದ ವಿವರಣೆಯಾಗಿದೆ
(2) (A) ಮತ್ತು (R) ಗಳೆರಡೂ ಸರಿ ಆದರೆ (R) ವು (A) ಯ ಸರಿಯಾದ ವಿವರಣೆಯಲ್ಲ
(3) (A) ಯು ಸರಿಯಾಗಿದೆ ಆದರೆ (R) ತಪ್ಪು
(4) (A) ಯು ತಪ್ಪು ಆದರೆ (R) ಸರಿ

24. ಪಟ್ಟಿ I (ಆದಿವಾಸಿ ಗುಂಪು) ಮತ್ತು ಪಟ್ಟಿ II (ರಾಜ್ಯಗಳ) ಹೊಂದಿಸಿರಿ :

| ಪಟ್ಟಿ *I* (ಆದಿವಾಸಿಗುಂಪು) | ಪಟ್ಟಿ *II* (ರಾಜ್ಯಗಳು) |
|---|---|
| A. ನಾಗಾಗಳು | I. ಪಶ್ಚಿಮ ಬಂಗಾಳ |
| B. ಭುಯಾಗಳು | II. ನಾಗಾಲ್ಯಾಂಡ್ |
| C. ಮಿಕಿರ್‌ಗಳು | III. ಕೇರಳ |
| D. ಉರಲಿಸ್‌ಗಳು | IV. ಅಸ್ಸಾಂ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | I | IV | II |
| (2) | II | I | IV | III |
| (3) | II | I | III | IV |
| (4) | II | III | I | IV |

25. ಒಂದು ನಿರ್ದಿಷ್ಟ ಬಗೆಯ ಪ್ರಾಣಿಗಳು ಅದೇ ಬಗೆಯ ಇನ್ನೊಂದು ಪ್ರಾಣಿಯನ್ನು ಆಕರ್ಷಿಸುವ ಸಲುವಾಗಿ ಹೊರಸೂಸುವ ರಾಸಾಯನಿಕ ವಸ್ತುವೆಂದರೆ

(1) ಹಾರ್ಮೋನುಗಳು
(2) ಫೆರೋಮೋನ್‌ಗಳು
(3) ನ್ಯೂಕ್ಲಿಯಿಕ್ ಆಮ್ಲ
(4) ಸ್ಟಿರಾಯ್ಡ್



www.shikarat.com

26. ಈ ಹೇಳಿಕೆಗಳನ್ನು ಪರಿಗಣಿಸಿ :

ಏಡ್ಸ್ ಹರಡುವುದು

A. ಲೈಂಗಿಕ ಸಂಭೋಗದಿಂದ

B. ರಕ್ತ ಪೂರಣದಿಂದ

C. ಸೊಳ್ಳೆಗಳು ಮತ್ತು ಇತರ ರಕ್ತ ಹೀರುವ ಕ್ರಿಮಿಗಳಿಂದ

D. ಜರಾಯು (ಪ್ಲಾಸೆಂಟಾ) ವಿನಿಂದ ಅಡ್ಡಲಾಗಿ

ಈ ಹೇಳಿಕೆಗಳ ಪೈಕಿ ಯಾವುದು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A, B ಮತ್ತು C ಮಾತ್ರ

(2) A, B ಮತ್ತು D ಮಾತ್ರ

(3) A, C ಮತ್ತು D ಮಾತ್ರ

(4) A ಮತ್ತು C ಮಾತ್ರ

27. ಪ್ರಧಾನ ಮಂತ್ರಿಯವರ ಅಧಿಕಾರಾವಧಿ

(1) ನಿಗದಿತವಾಗಿ 5 ವರ್ಷಗಳು

(2) ರಾಷ್ಟ್ರಪತಿಯವರು ಇಚ್ಛಿಸಿದಷ್ಟು ಅವಧಿ

(3) ಪಾರ್ಲಿಮೆಂಟ್‌ನ ಅದರಲ್ಲೂ ಲೋಕಸಭೆಯ ವಿಶ್ವಾಸವನ್ನು ಗಳಿಸಿರುವವರೆಗೂ

(4) ಸಚಿವರ ಮಂಡಲದ ವಿಶ್ವಾಸ ಇರುವ ವರೆಗೂ

28. ಭಾರತೀಯ ಸಂವಿಧಾನದ ಅಡಿಯಲ್ಲಿ ಪ್ರಜೆಯು

(1) ಯಾವುದೇ ಪರಿಸ್ಥಿತಿಯಲ್ಲಿಯೂ ತನ್ನ ಜೀವನ ಹಾಗೂ ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತವಾಗುವಂತಿಲ್ಲ

(2) ತುರ್ತು ಪರಿಸ್ಥಿತಿಯ ಅವಧಿಯಲ್ಲಿ ರಾಷ್ಟ್ರಪತಿಯವರ ಆಳ್ವಿಕೆಯಲ್ಲಿ ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತವಾಗಬಹುದು

(3) ಕಾನೂನಿನ ರೀತಿಯಂತೆ ಕ್ರಮತೆಗೆದುಕೊಂಡಾಗ ಮಾತ್ರ ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತನಾಗಬಹುದು

(4) ಈ ಮೇಲಿನ ಯಾವುವೂ ಅಲ್ಲ

29. ಕೆಳಗಿನವರಲ್ಲಿ ಯಾರು ಅಂತರ-ರಾಜ್ಯ ಸಭೆಯ ಸದಸ್ಯರಾಗಿದ್ದಾರೆ ?

A. ಪ್ರಧಾನ ಮಂತ್ರಿಗಳು

B. ಮುಖ್ಯ ಮಂತ್ರಿಗಳು

C. ರಾಷ್ಟ್ರಪತಿ ಆಡಳಿತದಲ್ಲಿ ರಾಜ್ಯಗಳ ರಾಜ್ಯಪಾಲರು

D. ಆರು ಕ್ಯಾಬಿನೆಟ್ ಸಚಿವರು

ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A, B ಮತ್ತು C ಮಾತ್ರ

(2) B, C ಮತ್ತು D ಮಾತ್ರ

(3) A, B ಮತ್ತು D ಮಾತ್ರ

(4) A, B, C ಮತ್ತು D

30. ಭಾರತೀಯ ಮಹಿಳೆಯು ಅಂತರರಾಷ್ಟ್ರೀಯ ಸೌಂದರ್ಯ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು "ಮಿಸ್ ವರ್ಲ್ಡ್ " ಬಿರುದನ್ನು ಗೆದ್ದ ಮೊದಲ ಭಾರತೀಯ ಮಹಿಳೆ ಯಾರು ?

(1) ಡಯಾನಾ ಹೇಡನ್

(2) ಯುಕ್ತಾ ಮುಖಿ

(3) ರೀಟಾ ಫರಿಯಾ

(4) ಐಶ್ವರ್ಯ ರೈ

www.shikarat.com

31. ಬೆಲೆಗಳ ಸಾಮಾನ್ಯ ಮಟ್ಟದಲ್ಲಿ ಹೆಚ್ಚಳ ಉಂಟಾಗುವ ಕಾರಣ ವೆಂದರೆ :

A. ಹಣ ಪೂರೈಕೆಯಲ್ಲಿನ ಹೆಚ್ಚಳ.

B. ಉತ್ಪನ್ನದ ಮೊತ್ತದ ಮಟ್ಟದಲ್ಲಿನ ಕುಸಿತ.

C. ಪರಿಣಾಮಕಾರಿ ಬೇಡಿಕೆಯಲ್ಲಿನ ಹೆಚ್ಚಳ.

ಈ ಹೇಳಿಕೆಗಳ ಪೈಕಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, B ಮತ್ತು C

32. ಬೈಸಿಕಲ್ಲುಗಳು, ಕಾರುಗಳಲ್ಲಿ ಬಾಲ್ ಬೇರಿಂಗ್‌ನ್ನು ಉಪಯೋಗಿಸಲಾಗುವುದು ಏಕೆಂದರೆ

(1) ಚಕ್ರ ಮತ್ತು ಅಚ್ಚುಗಳ ನಡುವಣ ಸಂಪರ್ಕದ ವಾಸ್ತವಿಕ ವಿಸ್ತೀರ್ಣವು ಹೆಚ್ಚಾಗಿರುವುದು

(2) ಚಕ್ರ ಮತ್ತು ಅಚ್ಚುಗಳ ನಡುವಣ ಸಂಪರ್ಕದ ಪರಿಣಾಮಕಾರಿ ವಿಸ್ತೀರ್ಣವು ಹೆಚ್ಚಾಗಿರುವುದು

(3) ಚಕ್ರ ಮತ್ತು ಅಚ್ಚುಗಳ ನಡುವಣ ಸಂಪರ್ಕದ ಪರಿಣಾಮಕಾರಿ ವಿಸ್ತೀರ್ಣವು ಕಡಿಮೆಯಾಗಿರುವುದು

(4) ಮೇಲಿನ ಯಾವ ಹೇಳಿಕೆಗಳೂ ಸರಿಯಲ್ಲ

33. ಮಿಂಚಿನ ವಾಹಕಗಳನ್ನು ಕಟ್ಟಡವನ್ನು ಮಿಂಚಿನ ಹೊಡೆತಗಳಿಂದ ರಕ್ಷಿಸಲು ಉಪಯೋಗಿಸುತ್ತಾರೆ.

ಈ ಕೆಳಗಿನ ಯಾವ ಹೇಳಿಕೆ / ಗಳು ಮಿಂಚಿನ ವಾಹಕಗಳನ್ನು ಕುರಿತಂತೆ ಸತ್ಯವಾಗಿರುವುದು ?

A. ಮಿಂಚಿನ ವಾಹಕಗಳು ಅದರ ತುದಿಯಲ್ಲಿ ವಿದ್ಯುತ್ ಕ್ಷೇತ್ರವನ್ನು ಸೃಷ್ಟಿ ಮಾಡುತ್ತದೆ. ಇದರಿಂದ ಮಿಂಚಿನ ಹೊಡೆತಗಳು ಅದಕ್ಕೆ ಆದ್ಯತೆ ಕೊಟ್ಟು ಬಡಿಯುತ್ತವೆ.

B. ಮಿಂಚಿನ ವಾಹಕಗಳು ಹೊಡೆತಗಳ ಪರಿಣಾಮಗಳನ್ನು ಕಡಿಮೆ ಮಾಡುತ್ತವೆ - ಕಟ್ಟಡದ ಮೇಲೆ ಮೇಲೆ ವಿದ್ಯುದಾವೇಶವನ್ನು ಒಂದೇ ಸಮವಾಗಿ ಹಂಚುವುದರ ಮೂಲಕ.

C. ಮಿಂಚಿನ ವಾಹಕಗಳು ಎಲ್ಲಾ ವಿದ್ಯುದಾವೇಶವನ್ನು ಭೂಮಿಯ ಆಳಕ್ಕೆ ಒಯ್ಯುತ್ತವೆ.

D. ಮಿಂಚಿನ ವಾಹಕಗಳನ್ನು ಕಟ್ಟಡಕ್ಕಿಂತಲೂ ಎತ್ತರವಾದ ಸ್ಥಳದಲ್ಲಿ ಸ್ಥಾಪಿಸಲಾಗುತ್ತದೆ.

ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) C ಮತ್ತು D ಮಾತ್ರ

(3) A, B ಮತ್ತು D ಮಾತ್ರ

(4) D ಮಾತ್ರ

www.shikarat.com

**34.** AC ವಿದ್ಯುತ್ತನ್ನು ವಿದ್ಯುತ್ ಗೃಹದಿಂದ ಅಧಿಕ ವೋಲ್ಟೇಜುಗಳಲ್ಲಿ ಪ್ರಸರಿಸಲಾಗುತ್ತದೆ ಏಕೆಂದರೆ

(1) ಕಡಿಮೆ ವೋಲ್ಟೇಜುಗಳಲ್ಲಿ ವಿದ್ಯುತ್ತನ್ನು ಪ್ರಸರಿಸಲಾಗುವುದಿಲ್ಲ

(2) ಅಧಿಕ ವೋಲ್ಟೇಜುಗಳಲ್ಲಿ ಪ್ರಸರಣದ ದರವು ವೇಗವಾಗಿರುತ್ತದೆ

(3) ಕಡಿಮೆ ವಿದ್ಯುತ್ ನಷ್ಟವಾಗುವುದರಿಂದ ಇದು ಅತ್ಯಂತ ಮಿತವ್ಯಯಕರವಾದುದು

(4) ವಿದ್ಯುತ್ ಮಾರ್ಗದಲ್ಲಿ ಕಳ್ಳತನವನ್ನು ತಡೆಯಲು ಒಂದು ಮುನ್ನೆಚ್ಚರಿಕೆ

**35.** ಝೂಂಬಿ ಕಂಪ್ಯೂಟರ್ ಎಂದರೇನು ?

(1) ಇದು ಇಂಟರ್‌ನೆಟ್ (ಅಂತರ್ಜಾಲ) ದೊಂದಿಗೆ ಸಂಪರ್ಕ ಹೊಂದಿದ್ದು, ಹ್ಯಾಕರ್‌ನಿಂದ, ಕಂಪ್ಯೂಟರ್ ವೈರಸ್ ಅಥವಾ ಟ್ರೋಜನ್ ಹಾರ್ಸ್ ಯಿಂದ ರಾಜಿ ಮಾಡಿಕೊಂಡಿದೆ ಮತ್ತು ಒಂದು ಬಗೆಯ ಕಾಡುವ ಕೆಲಸಗಳನ್ನು ನಿರ್ವಹಿಸುವ ಅಥವಾ ಮತ್ತೊಂದನ್ನು ದೂರ ನಿರ್ದೇಶನ ಮಾಡುವ ಕಂಪ್ಯೂಟರ್

(2) ಇದು ಒಂದು ದೊಡ್ಡ ಗಾತ್ರದ ಸಮಾನಾಂತರ ಕಂಪ್ಯೂಟರ್ ಆಗಿದ್ದು, ವಾಯುಗುಣ ಮತ್ತು ಹವಾಮಾನ ಪರಿಸ್ಥಿತಿಗಳ ಬಗ್ಗೆ ಭವಿಷ್ಯ ನುಡಿಯುವ ಮತ್ತು ಅನುಕರಣ ಮಾಡುವಂತಹುದಾಗಿದೆ

(3) ಕೃತಕ ಮಾಧ್ಯಮದಲ್ಲಿ ಹೊಸದಾಗಿ ಸ್ಥಾಪಿತವಾದ ಹಾರುವ ಹುದ್ದೆದಾರನ ತರಬೇತಿಗಾಗಿ ಬಳಕೆಯಾಗುವ ರೇಖಾ ಜಾಲರಿಯ ಕಂಪ್ಯೂಟರ್ ಮತ್ತು ಹಾರುವ ಅನುಭವವನ್ನು ಪಡೆಯುವಂತಹುದು

(4) ಕೃತಕ ಮಾಧ್ಯಮದಲ್ಲಿ ವೈದ್ಯರುಗಳನ್ನು ತರಬೇತು ಗೊಳಿಸುವ ಒಂದು ಕಂಪ್ಯೂಟರ್ ಹಾಗೂ ಔಷದಿ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಅನುಭವವನ್ನು ಪಡೆಯಲು ಅವರಿಗೆ ಸಹಾಯ ಮಾಡುತ್ತದೆ

**36.** ಈ ಕೆಳಗಿನ ಯಾವ ದೂರದರ್ಶನವು, ವಿದ್ಯುತ್ತ ಪ್ರವಾಹಕ್ಕೆ ಪ್ರತಿಯಾಗಿ ಬೆಳಕನ್ನು ಉತ್ಸರ್ಜಿಸಲು ಸಾವಯವ ಸಂಯುಕ್ತವನ್ನು ನೇಮಿಸುವುದನ್ನು ಪ್ರದರ್ಶಿಸುತ್ತದೆ ?

(1) ಎಲ್.ಇ.ಡಿ.

(2) ಪ್ಲಾಸ್ಮಾ ಟಿ.ವಿ.

(3) ಎನ್.ಇ.ಡಿ.

(4) ಒ.ಎಲ್.ಇ.ಡಿ.

**37.** ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

A. 6 ವರ್ಷಕ್ಕಿಂದಲೂ ಕಡಿಮೆ ವಯಸ್ಸಿನ ಮಕ್ಕಳಿಗಾಗಿ ಸಮಗ್ರತಾ ಅಭಿವೃದ್ಧಿ ಕಾರ್ಯಕ್ರಮವಾಗಿ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳನ್ನು ಜಾರಿಗೆ ತಂದಿರುವುದು.

B. ಗರ್ಭಿಣಿ ಮತ್ತು ಹಾಲೂಡಿಸುವ ತಾಯಂದಿರಿಗಾಗಿ ಸರಿಯಾದ ಪೌಷ್ಟಿಕತೆ ಮತ್ತು ಆರೋಗ್ಯ ಶಿಕ್ಷಣವನ್ನೂ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು ಒಳಗೊಳ್ಳುವುದು.

ಈ ಹೇಳಿಕೆಗಳ ಪೈಕಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) B ಮಾತ್ರ

(3) A ಮತ್ತು B ಎರಡೂ

(4) A ಅಥವಾ B ಆಗಲೀ ಅಲ್ಲ

www.shikarat.com

38. ಸಂಸತ್ತು ರಾಜ್ಯ ಪಟ್ಟಿಯಲ್ಲಿನ ಒಂದು ವಿಷಯದ ಬಗ್ಗೆ ಕಾನೂನನ್ನು ಮಾಡಬಹುದು ಯಾವಾಗ ಎಂದರೆ :

A. ತುರ್ತುಪರಿಸ್ಥಿತಿಯ ಘೋಷಣೆ ಮುಂದುವರಿದಿದ್ದಾಗ.

B. ಎರಡು ಅಥವಾ ಹೆಚ್ಚು ರಾಜ್ಯಗಳು ಒಂದು ವಿಷಯದ ಮೇಲೆ ಕಾನೂನನ್ನು ಮಾಡಲು ಸಂಸತ್ತನ್ನು ಕೋರಿದ್ದಾಗ.

C. ರಾಜ್ಯ ಸಭೆಯು, ಆ ವಿಷಯಗಳು ರಾಷ್ಟ್ರೀಯ ಮಹತ್ವವನ್ನು ಗಳಿಸಿವೆ ಎಂದು ನಡೆವಳಿಗಳನ್ನು ಹೊರಡಿಸಿದ್ದಾಗ.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) A, B ಮತ್ತು C

39. ಪಟ್ಟಿ I (ಪಟ್ಟಿಗಳು/ಅಧಿಕಾರ) ಮತ್ತು ಪಟ್ಟಿ II (ವಿಷಯಗಳು) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| *ಪಟ್ಟಿ I* *(ಪಟ್ಟಿಗಳು/ಅಧಿಕಾರ)* | *ಪಟ್ಟಿ II* *(ವಿಷಯಗಳು)* |
|---|---|
| A. ಕೇಂದ್ರ ಪಟ್ಟಿ | I. ಶಿಕ್ಷಣ |
| B. ರಾಜ್ಯ ಪಟ್ಟಿ | II. ಕೃಷಿ |
| C. ಸಹವರ್ತಿ ಪಟ್ಟಿ | III. ಬ್ಯಾಂಕಿಂಗ್ |
| D. ಶೇಷಾತ್ಮಕ ಅಧಿಕಾರ | IV. ಸೈಬರ್ ಭದ್ರತೆ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | III | I | IV |
| (3) | III | II | I | IV |
| (4) | IV | II | III | I |

40. ವಿಜಯನಗರದ ಮೊದಲ ರಾಜವಂಶವು ಸಂಗಮ ಎಂದು ಕರೆಸಿಕೊಂಡದ್ದು ಈ ಕೆಳಗಿನ ಯಾವ ಕಾರಣದಿಂದ ?

(1) ತಮಿಳು ಸಂಗಮ್‌ದ ಮಹತ್ವಪೂರ್ಣತೆಯಿಂದ ಸ್ಫೂರ್ತಿಗೊಂಡು

(2) ವಿಜಯನಗರವು ತುಂಗಭದ್ರ ಮತ್ತು ಕೃಷ್ಣ ಸಂಗಮದಲ್ಲಿ ನೆಲೆಯಾದದ್ದರಿಂದ

(3) ಹರಿಹರ ಮತ್ತು ಬುಕ್ಕರ ತಂದೆಯಾದ ಸಂಗಮರ ಹೆಸರಿನಿಂದ

(4) ಸಾಮ್ರಾಜ್ಯ ಸ್ಥಾಪನೆಯ ಆಚರಣೆಗಾಗಿ ಹರಿಹರ ಮತ್ತು ಬುಕ್ಕರು ಕವಿಗಳ ಒಂದು ಮಹತ್ವದ ಸಂಗಮ (ಸಭೆ) ಯನ್ನು ನಡೆಸಿದ್ದರಿಂದ

41. ಭಾರತದಲ್ಲಿನ ಆದ್ಯತಾ ವಲಯದ ಸಾಲಗಳನ್ನು ನೀಡುವ ಬ್ಯಾಂಕುಗಳು ಇವುಗಳ ಸಾಲವನ್ನು ನಿಯೋಜಿಸುತ್ತವೆ

(1) ಕೃಷಿ

(2) ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು

(3) ದುರ್ಬಲ ವರ್ಗಗಳು

(4) ಮೇಲಿನ ಎಲ್ಲವೂ

42. ಭಾರತದ ರಾಷ್ಟ್ರಪತಿಗಳು ಐದು ವರ್ಷಗಳ ಸೇವಾವಧಿ ಯವರೆಗೂ ಇರುವುದು

(1) ಆತನು ಆಯ್ಕೆಯಾದ ದಿನಾಂಕದಿಂದ

(2) ಅವರು ಕಚೇರಿಗೆ ಬಂದಾಗಿ ನಿಂದ

(3) ಪಾರ್ಲಿಮೆಂಟ್ ನಿರ್ಧರಿಸಿದಂತೆ

(4) ಚುನಾವಣಾ ಆಯೋಗವು ಅಧಿಸೂಚಿಸಿದಂತೆ



www.shikarat.com

43. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಎಂಬ ಜಬ್ಬಾರ್ ಪಟೇಲರ ಚಲನಚಿತ್ರದಲ್ಲಿ ಡಾ. ಅಂಬೇಡ್ಕರ್ ಆಗಿ ಅಭಿನಯಿಸಿದವರಾರು ?

(1) ನಾನಾ ಪಾಟೇಕರ್

(2) ನಾಸಿರುದ್ದೀನ್ ಷಾ

(3) ಮಮ್ಮೂಟ್ಟಿ

(4) ಮೋಹನ್‌ಲಾಲ್

44. ಕೂಡಿಕೊಂಡ ದವಡೆ, ಬಾಯಿಯನ್ನು ತೆರೆಯುವುದು ಕಷ್ಟಕರವಾದ ಚಿಹ್ನೆಯಾಗಿರುವುದು ಇದರಲ್ಲಿ

(1) ಟಿಟೆನಸ್

(2) ಕಾಲರಾ

(3) ಗದ್ದಕಟ್ಟು

(4) ಕ್ಯಾನ್ಸರ್

45. ಅಂಟನ್ ಚೆಖೋವ್, ನಾಟಕಕಾರರು ಒಬ್ಬ

(1) ರಷ್ಯಾದವರು

(2) ಜರ್ಮನಿಯವರು

(3) ಇಟಲಿಯವರು

(4) ಫ್ರೆಂಚ್‌ದೇಶದವರು

46. ಪಟ್ಟಿ I (ನೃತ್ಯ ರೂಪಗಳು) ಮತ್ತು ಪಟ್ಟಿ II (ರಾಜ್ಯ) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| *ಪಟ್ಟಿ I* *(ನೃತ್ಯ ರೂಪಗಳು)* | *ಪಟ್ಟಿ II* *(ರಾಜ್ಯ)* |
|---|---|
| A. ಕೂಚಿಪುಡಿ | I. ಒರಿಸ್ಸಾ |
| B. ಭರತನಾಟ್ಯಂ | II. ಆಂಧ್ರ ಪ್ರದೇಶ್ |
| C. ಕಥಕ್ಕಳಿ | III. ಕೇರಳ |
| D. ಒಡಿಸ್ಸಿ | IV. ತಮಿಳು ನಾಡು |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | IV | III | I |
| (2) | II | I | III | IV |
| (3) | II | IV | I | III |
| (4) | I | IV | II | III |

47. ಯಾವ ಚಕ್ರವರ್ತಿಯು ತನ್ನನ್ನು ಸಿಕಂದರ್-ಇ-ಸಾನಿ (ಎರಡನೇ ಅಲೆಕ್ಸಾಂಡರ್) ಎಂದು ಕರೆದುಕೊಂಡನು ?

(1) ಚಂದ್ರಗುಪ್ತ ವಿಕ್ರಮಾದಿತ್ಯ

(2) ಸಮುದ್ರಗುಪ್ತ

(3) ಅಲ್ಲಾಉದ್ದೀನ್ ಖಿಲ್ಜಿ

(4) ಇಲ್ತುತಮಿಷ್

www.shikarat.com

48. ಪಟ್ಟಿ I (ಪರ್ವತಗಳು/ಕಣಿವೆಗಳು/ಘಾಟಿಗಳೊಂದಿಗೆ) ಮತ್ತು ಪಟ್ಟಿ II (ರಾಜ್ಯಗಳು) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| ಪಟ್ಟಿ *I* (ಪರ್ವತಗಳು/ ಕಣಿವೆಗಳು/ ಘಾಟಿಗಳು) | | ಪಟ್ಟಿ *II* (ರಾಜ್ಯಗಳು) | |
|---|---|---|---|
| A. | ಝೂಸ್ಕರ್ ಶ್ರೇಣಿ | I. | ಹಿಮಾಚಲ ಪ್ರದೇಶ್ |
| B. | ಕಾಂಗ್ರಾ ಕಣಿವೆ | II. | ಮಹಾರಾಷ್ಟ್ರ |
| C. | ಛುಂಬಿ ಕಣಿವೆ | III. | ಜಮ್ಮು-ಕಾಶ್ಮೀರ್ |
| D. | ಭೋರ್ಗಾಟ್ ಕಣಿವೆ ಮಾರ್ಗ | IV. | ಸಿಕ್ಕಿಂ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | III | IV | I | II |
| (3) | II | I | III | IV |
| (4) | III | I | IV | II |

49. ಯಾವ ಕಂಪನಿಯು ಟೆಲಿನಾರ್‌ನೊಂದಿಗಿನ ಒಪ್ಪಂದದ ಮೇರೆಗೆ ಮೊಬೈಲ್ ಸರ್ವೀಸ್ ಪ್ರೊವೈಡರ್ ಟೆಲಿನಾರ್ ಇಂಡಿಯಾ ಎಂಬುದನ್ನು ಗಳಿಸಲು ಪ್ರವೇಶಿಸಿತು ?

(1) ವೊಡಾಫೋನ್

(2) ರಿಲಯನ್ಸ್ ಕಮ್ಯುನಿಕೇಶನ್

(3) ಐಡಿಯಾ ಸೆಲ್ಯುಲರ್

(4) ಭಾರ್ತಿ ಏರ್‌ಟೆಲ್

50. ನೆನಪಿನಲ್ಲುಳಿಯುವ ಹೆಜ್ಜೆಯಾಗಿ ಇಸ್ರೋ ಯಶಸ್ವಿಯಾಗಿ 104 ಉಪಗ್ರಹಗಳನ್ನು ಏಕಕಾಲದಲ್ಲಿ ಕೆಳಗಿನ ಯಾವ ಪ್ರದೇಶದಿಂದ ಉಡಾವಣೆ ಮಾಡಲಾಯಿತು ?

(1) ಚಂಡೀಪುರ್

(2) ಬೆಂಗಳೂರು

(3) ಅಹ್ಮದಾಬಾದ್

(4) ಶ್ರೀಹರಿಕೋಟಾ

51. ಶೇಖ್ ಮೊಹ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಇವರು ಭಾರತದ 68 ನೇ ಗಣರಾಜ್ಯೋತ್ಸವ ದಿನದ ಉತ್ಸವ ಆಚರಣೆಯಲ್ಲಿ (26 ನೇ ಜನವರಿ 2017) ಮುಖ್ಯ ಅತಿಥಿಯಾಗಿದ್ದರು. ಅವರು ಯಾವ ದೇಶದ ರಾಜಕುಮಾರ ?

(1) ಅಬು ಧಾಬಿ

(2) ಕತಾರ್

(3) ಸೌದಿ ಅರೇಬಿಯಾ

(4) ಬಹರೇನ್

52. ಭಾರತದ ನಂತರ ಯಾವ ದೇಶದ ಸರಕಾರವು ಅತ್ಯಧಿಕ ಮೊತ್ತದ ಕರೆನ್ಸಿ ನೋಟುಗಳನ್ನು ರದ್ಧತಿಗೊಳಿಸಿತು ಮತ್ತು ಅಹಿಂಸಾತ್ಮಕ ಪ್ರತಿಭಟನೆಗಳು ಮತ್ತು ಲೂಟಿಗೆ ದಾರಿ ಮಾಡಿಕೊಟ್ಟ ಕರೆನ್ಸಿಯ ತೀವ್ರ ಅಭಾವದ ನಂತರ ಬಲವಂತವಾಗಿ ನಾಗರಿಕರಿಗೆ ಅವಧಿಯನ್ನು ವಿಸ್ತರಿಸಿತು ?

(1) ಬ್ರೆಜಿಲ್

(2) ಕೊಲಂಬಿಯಾ

(3) ಪೆರು

(4) ವೆನಿಜೂಲಾ

www.shikarat.com

**53.** ಫಿಡೆಲ್ ಕ್ಯಾಸ್ಟ್ರೊರವರು ತಮ್ಮ 90 ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಈ ಕೆಳಗಿನ ಯಾವ ದೇಶದಲ್ಲಿ ಅವರು ಹಿಂದಿನ ರಾಷ್ಟ್ರಪತಿಗಳಾಗಿದ್ದರು ?

(1) ಹೈಟಿ

(2) ಕ್ಯೂಬಾ

(3) ಕಾಂಗೋ

(4) ಲಿಬ್ಯಾ

**54.** ಸರಕುಗಳು ಮತ್ತು ಸೇವೆಗಳ ತೆರಿಗೆ (GST) ಸಭೆಯ ಅಧ್ಯಕ್ಷರು ಯಾರು ?

(1) ನೀತಿ ಆಯೋಗದ ಉಪಾಧ್ಯಕ್ಷರು

(2) ಪ್ರಧಾನ ಮಂತ್ರಿಗಳು

(3) ಹಣಕಾಸಿನ ಸಚಿವರು

(4) ಹಣಕಾಸಿನ ಕಾರ್ಯದರ್ಶಿಗಳು

**55.** ಭಾರತದ ಯಾವ ರಾಜ್ಯವು ಪ್ರಥಮವಾಗಿ ಖಾಸಗಿಯಾಗಿ ನಿರ್ವಹಿಸಲ್ಪಡುವ ರೈಲ್ವೆ ನಿಲ್ದಾಣವನ್ನು ಹೊಂದುವುದು ?

(1) ತ್ರಿಪುರ

(2) ಕೇರಳ

(3) ಆಂಧ್ರ ಪ್ರದೇಶ್

(4) ಮಧ್ಯ ಪ್ರದೇಶ್

**56.** ಇತ್ತೀಚೆಗೆ ಪ್ರಕಟವಾದ 64ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಉತ್ತಮ ಪುರುಷ ಹಿನ್ನೆಲೆ ಗಾಯಕರ ಪ್ರಶಸ್ತಿ ಪಡೆದವರಾರು ?

(1) ಸೋನು ನಿಗಮ್

(2) ಸುಂದರಯ್ಯರ್

(3) ಶಂಕರ್ ಮಹಾದೇವನ್

(4) ಕಾರ್ತೀಕ್

**57.** ಇತ್ತೀಚೆಗಷ್ಟೇ ಅಗಲಿದ ನುರಿತ ಅಭಿನಯಕಾರ ಮ... ವೇಣುರವರು ಯಾವ ಚಲನ ಚಿತ್ರ ಉದ್ಯಮದವರು ?

(1) ತಮಿಳು

(2) ಮಲಯಾಳಂ

(3) ಒರಿಯಾ

(4) ತೆಲುಗು

**58.** ಕೆಳಗಿನವುಗಳಲ್ಲಿ ಯಾವುದು ಭಾರತದ ಪ್ರಥಮ ನಾನ... ಬ್ಯಾಂಕಿಂಗ್ ಕಂಪನಿಯಾಗಿದ್ದು ವೀಸಾ ಪಾವ... ಜಾಲಬಂಧದಲ್ಲಿ ಪೂರ್ಣವಾಗಿ ತೊಡಗಿಕೊಂಡ ಸದಸ್ಯರು ಯಾರು ?

(1) ಪೇ ಟಿ ಎಂ

(2) ಐಟಿಝುಡ್ ಕ್ಯಾಶ್

(3) ಪೇ ಯೂ ಮನಿ

(4) ಪಾಕೆಟ್ಸ್

**59.** ಪಟ್ಟಿ I (ವ್ಯಕ್ತಿಗಳೊಂದಿಗೆ) ಮತ್ತು ಪಟ್ಟಿ II (ಕ್ಷೇತ್ರಗಳನ್ನು) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| *ಪಟ್ಟಿ I* (*ವ್ಯಕ್ತಿಗಳು*) | *ಪಟ್ಟಿ II* (*ಕ್ಷೇತ್ರಗಳು*) |
|---|---|
| A. ವಿಶಾಖದತ್ತ | I. ಔಷಧಿ |
| B. ನಾಗಾರ್ಜುನ | II. ನಾಟಕ |
| C. ಚರಕ | III. ಲೋಹವಿದ್ಯೆ ಮತ್ತು ರಸವಿದ್ಯೆ |
| D. ಭರಮಗುಪ್ತ | IV. ಗಣಿತ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | III | IV | II |
| (2) | II | I | III | IV |
| (3) | II | III | I | IV |
| (4) | III | IV | I | II |

www.shikarat.com

60. ಹಿಂದಿನ ತಮಿಳು ಸಾಹಿತ್ಯದಲ್ಲಿ ಕೆಳಗಿನ ಯಾವ ದಕ್ಷಿಣ ಭಾರತೀಯ ನಗರಗಳ ಮೇಲಿನ ವರ್ಣನೆಗಳಲ್ಲಿ ಯವನ ಹಡಗುಗಳು ತಮ್ಮ ಸರಕಿನೊಂದಿಗೆ ಆಗಮಿಸುವುದು ಮತ್ತು ನಗರದ ಯವನ ಭಾಗವು ಸಮೃದ್ಧಭರಿತ ವಾಗಿತ್ತೆಂಬುದನ್ನು ಕುರಿತಾಗಿ ಇವೆ ?

(1) ಅರಿಕಮೇಡು

(2) ಕಾವೇರಿಪಟ್ಟಣಂ

(3) ಮಾಮಲ್ಲಪುರಂ

(4) ಮುಝಿರೀಸ್

61. ಪಟ್ಟಿ I (ಭಾರತೀಯ ಲೇಖಕರರೊಂದಿಗೆ) ಮತ್ತು ಪಟ್ಟಿ II (ಕೃತಿಗಳನ್ನು) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| *ಪಟ್ಟಿ I* (ಭಾರತೀಯ ಲೇಖಕರು) | | *ಪಟ್ಟಿ II* (ಕೃತಿಗಳು) |
|---|---|---|
| A. ಜವಾಹರ್‌ಲಾಲ್ ನೆಹರೂ | I. | ದಿ ಬ್ರೋಕನ್ ವಿಂಗ್ |
| B. ಸರೋಜಿನಿ ನಾಯ್ಡು | II. | ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ |
| C. ಮುಲ್ಕ್‌ರಾಜ್ ಆನಂದ್ | III. | ಟ್ರೇನ್ ಟು ಪಾಕಿಸ್ತಾನ್ |
| D. ಖುಶ್‌ವಂತ್ ಸಿಂಗ್ | IV. | ಕೂಲಿ |
| | V. | ಎ ಬಿಗಿನಿಂಗ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | III | IV | V |
| (2) | II | I | IV | III |
| (3) | II | III | I | IV |
| (4) | III | IV | V | II |

62. ಪಟ್ಟಿ I (ವ್ಯಕ್ತಿಗಳ ಹೆಸರುಗಳೊಂದಿಗೆ) ಮತ್ತು ಪಟ್ಟಿ II ಅವರು ಸುಪರಿಚಿತ (ಉಪನಾಮಗಳು/ ಪರಿವಾರಗಳ ಹೆಸರುಗಳು) ಇವುಗಳನ್ನು ಸಂಕೇತ ಆಧರಿಸಿ ಹೊಂದಿಸಿರಿ :

| *ಪಟ್ಟಿ I* (ವ್ಯಕ್ತಿಗಳ ಹೆಸರುಗಳು) | | *ಪಟ್ಟಿ II* (ಉಪನಾಮಗಳು/ ಪರಿವಾರಗಳ ಹೆಸರುಗಳು) |
|---|---|---|
| A. ಬಾಲ ಗಂಗಾಧರ್ ತಿಲಕ್ | I. | ಚಾಚಾ, ಪಂಡಿತ್‌ಜಿ |
| B. ಜವಾಹರ್‌ಲಾಲ್ ನೆಹರೂ | II. | ಲೋಕಮಾನ್ಯ |
| C. ಖಾನ್ ಅಬ್ದುಲ್ ಗಫಾರ್ ಖಾನ್ | III. | ದೇಶ್‌ಬಂಧು |
| D. ಸಿ.ಆರ್. ದಾಸ್ | IV. | ಗಡಿನಾಡ ಗಾಂಧಿ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | III | IV | II |
| (2) | II | I | IV | III |
| (3) | II | III | I | IV |
| (4) | III | IV | I | II |

63. 2017 ರ ಸಾಂಗ್‌ಕೆನ್ ಉತ್ಸವವು ಯಾವ ರಾಜ್ಯದಲ್ಲಿ ನಡೆಯಿತು ?

(1) ಸಿಕ್ಕಿಂ

(2) ಅಸ್ಸಾಂ

(3) ಜಾರ್‌ಖಂಡ್

(4) ಅರುಣಾಚಲ್ ಪ್ರದೇಶ್

www.shikarat.com

64. ಭಾರತದ ರಾಜ್ಯದ ರಾಜ್ಯಪಾಲರಿಗೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಪರಿಗಣಿಸಿ :

A. ರಾಜ್ಯಪಾಲರಾಗಿ ನೇಮಕವಾಗುವವರಿಗೆ 45 ವರ್ಷಗಳು ಪೂರ್ಣವಾಗಿರಬೇಕು.

B. ರಾಷ್ಟ್ರಪತಿಗಳ ಇಚ್ಛೆಯ ಮೇರೆಗೆ ರಾಜ್ಯಪಾಲರು ಅಧಿಕಾರದಲ್ಲಿರುತ್ತಾರೆ.

C. ಐದು ವರ್ಷದ ಅವಧಿ ಪೂರ್ಣವಾದ ಮೇಲೆ ರಾಜ್ಯಪಾಲರು ತಮ್ಮ ಹುದ್ದೆಯಲ್ಲಿ ಉತ್ತರಾಧಿಕಾರಿ ಬರದಿದ್ದರೂ ಮುಂದುವರಿಯುವಂತಿಲ್ಲ.

D. ರಾಜ್ಯದ ಕಾರ್ಯನಿರ್ವಹಣಾಧಿಕಾರವು ರಾಜ್ಯಪಾಲರದ್ದು.

ಮೇಲಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿ ? ಸಂಕೇತದ ಮೂಲಕ ಸರಿ ಉತ್ತರವನ್ನು ಗುರ್ತಿಸಿ :

(1) A ಮತ್ತು B ಮಾತ್ರ
(2) A, B ಮತ್ತು C ಮಾತ್ರ
(3) B, C ಮತ್ತು D ಮಾತ್ರ
(4) B ಮತ್ತು D ಮಾತ್ರ

65. ಈ ಕೆಳಗೆ ಪ್ರಮುಖವಾದ ಹಿಂದಿನ ರಾಷ್ಟ್ರೀಯ ಬರೆಹಗಳು ಮತ್ತು ಅವುಗಳ ಬರಹಗಾರರನ್ನು ನೀಡಿದೆ :

A. ಬಡತನ ಹಾಗೂ ಭಾರತದಲ್ಲಿ ಬ್ರಿಟಿಷ್‌ರದಲ್ಲದ ಆಳ್ವಿಕೆ – ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ

B. ನೀಲ್ ದರ್ಪಣ್ – ದಾದಾಭಾಯಿ ನವರೋಜಿ

C. ಹಿಂದ್ ಸ್ವರಾಜ್ – ಮಹಾತ್ಮಾ ಗಾಂಧಿ

D. ಆನಂದ ಮಠ್ – ದೀನಬಂಧು ಮಿತ್ರ

ಈ ಮೇಲಿನ ಜೋಡಿಗಳಲ್ಲಿ ಯಾವುದು / ವು ಸರಿ ? ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

(1) A ಮತ್ತು B ಮಾತ್ರ
(2) C ಮಾತ್ರ
(3) B ಮತ್ತು D ಮಾತ್ರ
(4) A, B, C ಮತ್ತು D

66. ವಿಶ್ವ ಸಂಸ್ಥೆಯ ಸಂಸ್ಥೆಗಳೊಂದಿಗೆ (ಪಟ್ಟಿ I) ಅವುಗಳ ಕೇಂದ್ರ ಸ್ಥಾನಗಳನ್ನು (ಪಟ್ಟಿ II) ಹೊಂದಿಸಿರಿ :

| *ಪಟ್ಟಿ I* (ವಿ.ಸಂ.ಯ ಸಂಸ್ಥೆಗಳು) | *ಪಟ್ಟಿ II* (ಕೇಂದ್ರ ಸ್ಥಾನಗಳು) |
|---|---|
| A. WHO (ವಿಶ್ವ ಆರೋಗ್ಯ ಸಂಸ್ಥೆ) | I. ಪ್ಯಾರಿಸ್ |
| B. IMF (ಅಂತರರಾಷ್ಟ್ರೀಯ ಹಣಕಾಸು ನಿಧಿ) | II. ರೋಂ |
| C. IFAD | III. ಜಿನೀವಾ |
| D. ಯುನೆಸ್ಕೋ | IV. ವಾಷಿಂಗ್ಟನ್ ಡಿಸಿ |
| | V. ವಿಯೆನ್ನಾ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | III | V | II | I |
| (2) | III | IV | II | I |
| (3) | V | IV | II | I |
| (4) | III | IV | II | V |

67. ಐತಿಹಾಸಿಕ ಸ್ಮಾರಕಗಳ ಸ್ಥಳಗಳೊಂದಿಗೆ (ಪಟ್ಟಿ I) ಅವುಗಳು ಇರುವ ದೇಶಗಳನ್ನು (ಪಟ್ಟಿ II) ಹೊಂದಿಸಿರಿ :

| *ಪಟ್ಟಿ I* (ಐತಿಹಾಸಿಕ ಸ್ಮಾರಕಇರುವ ಸ್ಥಳ) | *ಪಟ್ಟಿ II* (ಅವುಗಳು ಇರುವ ದೇಶ / ರಾಷ್ಟ್ರಗಳು) |
|---|---|
| A. ಅಂಗ್ ಕರ್ ವ್ಯಾಟ್ | I. ಅಫ್ಘಾನಿಸ್ತಾನ |
| B. ಬೊರೊಬುಡುರ್ | II. ಶ್ರೀಲಂಕಾ |
| C. ಬಾಮಿಯನ್ | III. ಜಾವಾ |
| D. ಅನುರಾಧಪುರಂ | IV. ಕೊಂಬೋಡಿಯಾ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | IV | III | I | II |
| (2) | III | IV | I | II |
| (3) | III | II | IV | I |
| (4) | I | III | II | IV |



www.shikaront.com

68. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಭಾರತೀಯ ರಿಸರ್ವ್ ಬ್ಯಾಂಕ್

A. ಬ್ಯಾಂಕರ್‌ಗಳ ಬ್ಯಾಂಕ್ ಆಗಿ ವರ್ತಿಸುವುದು.

B. ಬಂಡವಾಳ ವಿಷಯಗಳ ನಿಯಂತ್ರಕವಾಗಿ ವರ್ತಿಸುವುದು.

C. ವಿವಿಧ ಭಾಜಕಮೊತ್ತಗಳ (ಡಿನಾಮಿನೇಷನ್ಸ್) ಕರೆನ್ಸಿ ನೋಟುಗಳನ್ನು ಜಾರಿ ಮಾಡುವುದು.

D. ರೋಗಗ್ರಸ್ತ ಕೈಗಾರಿಕಾ ಘಟಕಗಳಿಗೆ ಸಾಲ ನೀಡುವ ಕೊನೆಯ ಆಶ್ರಯದಾತನಾಗಿ ವರ್ತಿಸುವುದು.

ಮೇಲೆ ನೀಡಿರುವ ಈ ಹೇಳಿಕೆಗಳಲ್ಲಿ ಯಾವ ಹೇಳಿಕೆಯು ಸರಿ ?

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆರಿಸಿ :

(1) A, B, C ಮತ್ತು D

(2) A ಮತ್ತು B ಮಾತ್ರ

(3) A ಮತ್ತು C ಮಾತ್ರ

(4) A, B ಮತ್ತು C ಮಾತ್ರ

69. ಸಂವಿಧಾನವನ್ನು ಈ ಕೆಳಗಿನ ಮಾರ್ಗಗಳಿಂದ ತಿದ್ದುಪಡಿ ಮಾಡಬಹುದು :

A. ಪಾರ್ಲಿಮೆಂಟಿನ ಸರಳ ಬಹುಮತದಿಂದ.

B. ಪಾರ್ಲಿಮೆಂಟಿನ ವಿಶೇಷ ಬಹುಮತದಿಂದ.

C. ಪಾರ್ಲಿಮೆಂಟಿನ ವಿಶೇಷ ಬಹುಮತದಿಂದ ಮತ್ತು ರಾಜ್ಯಶಾಸಕರ ಅರ್ಧ ಮಂದಿಯ ಅನುಸಮರ್ಥನೆಯಿಂದ.

ಕಲಮು 368 ಕ್ಕೆ ಸಂಬಂಧಿಸಿದಂತೆ ಈ ಪೈಕಿ ಯಾವುದು ವ್ಯಾಪ್ತಿಯಿಂದ ಹೊರಗೆ ?

ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) B ಮತ್ತು C ಮಾತ್ರ

(2) A ಮತ್ತು C ಮಾತ್ರ

(3) A ಮಾತ್ರ

(4) ಈ ಮೇಲಿನ ಯಾವುದೂ ಅಲ್ಲ

70. ಕೆಳಗಿನವುಗಳಲ್ಲಿ ಯಾವ ಗುಲಾಮೀ ಮನೆತನದ ದೊರೆಯು ಲಾಹೋರ್‌ನಲ್ಲಿ ಪೋಲೋ ಆಟವನ್ನು ಆಡುತ್ತಿದ್ದಾಗ ಕುದುರೆಯಿಂದ ಕೆಳಗೆ ಬಿದ್ದುದರ ಪರಿಣಾಮವಾಗಿ ಕೊನೆಯ ಉಸಿರನ್ನೆಳೆದರು ?

(1) ಕುತುಬ್-ಉದ್-ದಿನ್ ಐಬಕ್

(2) ಇಲ್ತುತ್‌ಮಿಶ್

(3) ಬಲ್‌ಬನ್

(4) ಬಹರಾಮ್‌ಷಾ

71. ಕ್ರಿ.ಶ. 1656 – 1658 ರ ನಡುವಣ ಅವಧಿಯಲ್ಲಿ ಶಹಜಹಾನನ ಯಾವ ನಾಲ್ವರು ಮಕ್ಕಳಲ್ಲಿ ಸಿಂಹಾಸನಕ್ಕಾಗಿ ಹೋರಾಟವೇರ್ಪಟ್ಟಿತು ?

A. ಶೂಜಾ

B. ಮುರಾದ್

C. ಖುಸ್ರೋ

D. ದಾವರ ಬಕ್ಷ್

E. ಔರಂಗಜೇಬ್

F. ದಾರಾ ಶಿಕೋ

ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) B, D, E, F

(2) A, C, D, F

(3) B, C, E, F

(4) A, B, E, F

www.shikarat.com

72. ಕೆಳಗೆ ನೀಡಲಾಗಿರುವ ಭಾರತದ ಸಂವಿಧಾನದ ಹಕ್ಕುಗಳು ಪೌರರಲ್ಲದವರಿಗೂ ಲಭ್ಯವಾಗಿರುವಂತಹವು ಯಾವುವು ?

(1) ವಾಕ್ ಸ್ವಾತಂತ್ರ್ಯ, ಸಭೆ ಮತ್ತು ಸಂಘದ ಸ್ವಾತಂತ್ರ್ಯ
(2) ಭಾರತದ ಯಾವುದೇ ಪ್ರಾಂತ್ಯದಲ್ಲಾದರೂ ಚಲಿಸುವ, ಉಳಿದು ಕೊಳ್ಳುವ ಮತ್ತು ನೆಲೆಯಾಗುವ ಸ್ವಾತಂತ್ರ್ಯ
(3) ಯಾವುದೇ ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರದಲ್ಲಿ ತೊಡಗುವ ಸ್ವಾತಂತ್ರ್ಯ
(4) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

73. ಪ್ರತಿಯೊಂದು ಡಿಗ್ರಿ ರೇಖಾಂಶಕ್ಕೆ ಯಾವುದೇ ಒಂದು ಸ್ಥಳದ ಸ್ಥಳೀಯ ಕಾಲಮಾನವು ಗ್ರೀನ್‌ವಿಚ್ ಮೀನ್ ಕಾಲಕ್ಕೆ ಹೊಂದಿರುವ ವ್ಯತ್ಯಾಸ ಎಷ್ಟು ನಿಮಿಷಗಳು ?

(1) 2 ನಿಮಿಷಗಳು
(2) 4 ನಿಮಿಷಗಳು
(3) 6 ನಿಮಿಷಗಳು
(4) 8 ನಿಮಿಷಗಳು

74. ಇವುಗಳನ್ನು ಹೊಂದಿಸಿ ಬರೆಯಿರಿ :

| | *ಪಟ್ಟಿ I* | | *ಪಟ್ಟಿ II* |
|---|---|---|---|
| A. | ಮೇಷ ಸಂಕ್ರಾಂತಿ | I. | ಸೆಪ್ಟೆಂಬರ್ 23 |
| B. | ಕರ್ಕಾಟಕ ಸಂಕ್ರಾಂತಿ | II. | ಮಾರ್ಚ್ 21 |
| C. | ತುಲಾ ಸಂಕ್ರಾಂತಿ | III. | ಡಿಸೆಂಬರ್ 22 |
| D. | ಮಕರ ಸಂಕ್ರಾಂತಿ | IV. | ಜೂನ್ 21 |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | IV | I | III |
| (2) | IV | II | III | I |
| (3) | III | I | IV | II |
| (4) | I | III | II | IV |

75. ಆಫ್ರಿಕಾ ಖಂಡದ ಅತ್ಯುನ್ನತ ಶಿಖರ

(1) ಮೌಂಟ್ ಕಿಲಿಮಾಂಜಿರೋ
(2) ಮೌಂಟ್ ಕೀನ್ಯಾ
(3) ಅಟ್ಲಾಸ್ ಪರ್ವತಗಳು
(4) ಡ್ರಾಕೆನ್ಸ್‌ಬರ್ಗ್ ಪರ್ವತಗಳು

76. ಚಿನೂಕ್ ಎಂಬ ಸ್ಥಳೀಯ ಮಾರುತವಿರುವುದು ಇಲ್ಲಿ

(1) ದಕ್ಷಿಣ ಯೂರೋಪಿನ ಆಲ್ಪ್ಸ್ ಪರ್ವತಗಳು
(2) ಅಮೇರಿಕಾ ಸಂಯುಕ್ತ ಸಂಸ್ಥಾನದ ರಾಕಿ ಪರ್ವತಗಳು
(3) ಉತ್ತರ ಆಫ್ರಿಕಾದ ಸಹರಾ ತೀರ
(4) ದಕ್ಷಿಣ ಅಮೇರಿಕಾದ ಆಂಡೀಸ್ ಪರ್ವತಗಳು

77. ಇವುಗಳಲ್ಲಿ ಯಾವುದು ಭೂ ವಲಯದಿಂದ (ಭೂ ಬಂಧಿತ) ಸುತ್ತುವರಿದಿರುವ ದೇಶ ?

(1) ಬೊಲಿವಿಯಾ
(2) ಫಿನ್‌ಲ್ಯಾಂಡ್
(3) ಸ್ಪೈನ್
(4) ಇಟಲಿ

78. ಮೂರನೇ ಪಾಣಿಪತ್ ಯುದ್ಧದಲ್ಲಿ ಮರಾಠರು ಇವರಿಂದ ಸೋಲಿಸಲ್ಪಟ್ಟರು

(1) ಮೊಘಲರು
(2) ಅಫಘನ್ನರು
(3) ರೊಹಿಲ್ಲರು
(4) ಇಂಗ್ಲೀಷ್

www.shikarat.com

79. "ಕ್ರೌರ್ಯ ಮತ್ತು ಕೊಳ್ಳೆಗೆ ಕೊನೆಯಿಲ್ಲದ್ದು ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆ ಎಂದು ಕರೆಯಲಾಗುತ್ತಿದೆ ಕೆಳಗಿನವರಲ್ಲಿ,"

ಈ ಮೇಲಿನ ಹೇಳಿಕೆಯನ್ನು ನೀಡಿದವರಾರು ?

(1) ಲೆನಿನ್

(2) ಟ್ರಾಟಸ್ಕಿ

(3) ಸ್ಟಾಲಿನ್

(4) ಚಿಯಾಂಗ್ ಕೈ-ಷೇಕ್

80. ಪಟ್ಟಿ I (ರಾಜವಂಶಗಳು) ಮತ್ತು ಪಟ್ಟಿ II (ಸ್ಥಾಪಕರು) ನೆಲೆಯಾಗಿರುವ ಭಾಗಗಳನ್ನು ಹೊಂದಿಸಿರಿ :

| *ಪಟ್ಟಿ I (ರಾಜವಂಶ)* | *ಪಟ್ಟಿ II (ಸ್ಥಾಪಕರು)* |
|---|---|
| A. ನಿಜಾಮ ಷಾಹಿ ರಾಜವಂಶ | I. ಖಾಸಿಮ್ ಬರಿದ್ |
| B. ಕುತುಬ್ ಷಾಹಿ ರಾಜವಂಶ | II. ಮಾಲಿಕ್ ಅಹ್ಮದ್ |
| C. ಇಮಾದ್ ಷಾಹಿ ರಾಜವಂಶ | III. ಕುಲಿ ಕುತುಬ್-ಉಲ್-ಮುಲ್ಕ್ |
| D. ಬರಿದ್ ಷಾಹಿ ರಾಜವಂಶ | IV. ಫತುಲ್ಲಾ ಇಮಾದ್-ಉಲ್-ಮುಲ್ಕ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | III | IV | I |
| (3) | IV | II | I | III |
| (4) | III | II | IV | I |

81. ಯಾರ ಆಶ್ರಯದಲ್ಲಿ ಎಲ್ಲೋರಾದ ಕೈಲಾಶ ದೇವಸ್ಥಾನ ನಿರ್ಮಾಣಗೊಂಡಿತು ?

(1) ಚಾಲುಕ್ಯರು

(2) ಪಲ್ಲವರು

(3) ರಾಷ್ಟ್ರಕೂಟರು

(4) ಚೋಳರು

82. ಇ-ತ್ಯಾಜ್ಯಗಳು ಪರಿಸರವನ್ನು ಮಲಿನ ಗೊಳಿಸುವುದು ಹೀಗೆ

A. ಮಣ್ಣಿಗೆ ಒಸರಿಸುವುದರಿಂದ

B. ಭೂ ಭರ್ತಿಯಲ್ಲಿ ಅನಿಯಂತ್ರಿತ ಬೆಂಕಿಯಿಂದ

C. ಭಸ್ಮೀಕರಣವು ಉತ್ಸರ್ಜಿಸುವ ವಿಷಕಾರಿ ಧೂಮಗಳಿಂದ

D. ಕರಗುವ ಚಕ್ಕೆಗಳಿಂದುಂಟಾದ ಆಮ್ಲಗಳು ಮತ್ತು ರಾಡಿ, ನೀರನ್ನು ಕಲುಷಿತ ಗೊಳಿಸುವುದು

ಮೇಲಿನವುಗಳಲ್ಲಿ ಯಾವುವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A, B ಮತ್ತು C ಮಾತ್ರ

(4) A, B, C ಮತ್ತು D

www.shikarat.com

83. ಈ ಹೇಳಿಕೆಗಳನ್ನು ಪರಿಗಣಿಸಿ :

A. ಭಿಲಾಯಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವಲ್ಲಿ ಯು.ಎಸ್.ಎಸ್.ಆರ್. ನೆರವು ನೀಡಿತು.

B. ಬೊಕಾರೋ ಉಕ್ಕಿನ ಕಾರ್ಖಾನೆ ಸ್ಥಾಪಿಸುವಲ್ಲಿ ಬ್ರಿಟನ್ ನೆರವು ನೀಡಿತು.

ಮೇಲಿನವುಗಳಲ್ಲಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ
(2) B ಮಾತ್ರ
(3) A ಮತ್ತು B ಎರಡೂ
(4) Aಯೂ ಅಲ್ಲ B ಯೂ ಅಲ್ಲ

84. ವಾಯುಮಂಡಲದ ಓಜೋನ್ ಪದರವು ಇದನ್ನು ಹೀರುತ್ತದೆ

(1) ವಿಶ್ವ (ಕಾಸ್ಮಿಕ್) ಕಿರಣಗಳು
(2) ಅವಕೆಂಪು ಕಿರಣಗಳು
(3) ಅತಿನೇರಳೆ ಕಿರಣಗಳು
(4) ಈ ಮೇಲಿನ ಎಲ್ಲವೂ

85. ಅಲ್ಲಾವುದ್ದೀನ ಖಿಲ್ಜಿಯಿಂದ ನಿರ್ಮಿಸಲಾಗಿಲ್ಲದ ಸ್ಮಾರಕಯಾವುದು ?

(1) ಅಲಾಯ್ ದರ್ವಾಜಾ
(2) ಹೌಜ್ ಖಾಸ್
(3) ಜಮಾತಾ ಖಾನಾ ಮಸೀದಿ
(4) ಅಢಾಯಿ ದಿನ್ ಕಾ ಜೋಪ್ರಾ

86. ಈ ಪೈಕಿ ಶಿವಾಜಿಯ ಅಧ್ಯಾತ್ಮಗುರು ಯಾರು ?

(1) ಸೂರ್ ದಾಸ್
(2) ಹರಿ ದಾಸ್
(3) ತುಳಸೀ ದಾಸ್
(4) ರಾಮ ದಾಸ್

87. ಪಟ್ಟಿ I (ದೇಶ) ಮತ್ತು ಪಟ್ಟಿ II (ಸಂಸತ್ತು) ಹೊಂದಿಸಿರಿ :

| ಪಟ್ಟಿ I (ದೇಶಗಳು) | ಪಟ್ಟಿ II (ಸಂಸತ್ತು) |
|---|---|
| A. ಜಪಾನ್ | I. ಬಂಡೆಸ್ಟಾಗ್ |
| B. ಯು.ಎಸ್.ಎ. | II. ಡಯೆಟ್ |
| C. ಇಸ್ರೇಲ್ | III. ನೆಸ್ಸೆಟ್ |
| D. ಜರ್ಮನಿ | IV. ಕಾಂಗ್ರೆಸ್ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | IV | I | III |
| (2) | II | IV | III | I |
| (3) | IV | II | III | I |
| (4) | IV | III | II | I |

88. ಸಾಗರದ ನೀರಿನಲ್ಲಿನ ಲವಣಾಂಶದ ಮೊತ್ತ ಮತ್ತು ಹಂಚಿಕೆಯು ಇದರಿಂದ ನಿಯಂತ್ರಿಸಲ್ಪಡುವುದು :

A. ಬಾಷ್ಪೀಭವನದ ದರ

B. ನದಿಗಳಿಂದ ಪೂರೈಕೆಯಾಗುವ ಹೊಸ ನೀರು

C. ಪ್ರಚಲಿತದ ಮಾರುತಗಳು

ಮೇಲಿನವುಗಳಲ್ಲಿ ಯಾವುದು/ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ
(2) A ಮತ್ತು C ಮಾತ್ರ
(3) A ಮತ್ತು B ಮಾತ್ರ
(4) A, B ಮತ್ತು C

www.shikarat.com

89. ಭೂಕಂಪದ ಕಾರಣವು ಯಾವ ಪ್ರವರ್ಗದಲ್ಲಿ ಸೇರುತ್ತದೆ ?

A. ಜ್ವಾಲಾಮುಖೀಯ ಚಟುವಟಿಕೆ

B. ಮಡಿಕೆಯಾಗುವುದು ಮತ್ತು ಸ್ತರದಲ್ಲಿನ ದೋಷ

C. ತಟ್ಟೆ ನಿರ್ಮಿತಿ

ಮೇಲಿನವುಗಳಲ್ಲಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) A ಮತ್ತು C ಮಾತ್ರ

(3) A ಮತ್ತು B ಮಾತ್ರ

(4) A, B ಮತ್ತು C ಮಾತ್ರ

90. ಒಂದು ಪರ್ವತವು ಉದ್ಭವವಾಗಿ ಏರುವ ವಾಯು ಬಲದ ಹರಿವಿಗೆ ತಡೆಗೋಡೆಯಾಗಿ ವರ್ತಿಸುವಾಗ, ವಾಯುವು ತಂಪಾಗಿ ಸ್ಥಿರೋಷ್ಣವಾಗುತ್ತದೆ ಮತ್ತು ಮೋಡಗಳು ಹಾಗೂ ಆವಿ ಸಾಂದ್ರೀಕರಣವು ಇದರ ಪರಿಣಾಮವಾಗಿ ಉಂಟಾಗುತ್ತದೆ ಈ ರೀತಿಯ ಮಳೆಯ ಬಗೆಯನ್ನು ಹೀಗೆನ್ನುತ್ತಾರೆ

(1) ಚಂಡ ಮಾರುತೀಯ

(2) ಅಭಿಮುಖೀಯ

(3) ಪರ್ವತ ವಿಜ್ಞಾನ

(4) ಸಾಂಪ್ರದಾಯಿಕ

91. ವಾಯುಮಂಡಲದ ಅತ್ಯಂತ ಮೇಲಿನ ಪದರವನ್ನು ಹೀಗೆನ್ನಲಾಗುವುದು

(1) ಎಕ್ಸೋಸ್ಫಿಯರ್ (ಬಾಹ್ಯಗೋಳ)

(2) ಅಯನೋಸ್ಫಿಯರ್ (ಆಯಾನುಗೋಳ)

(3) ಟ್ರೋಪೋಸ್ಫಿಯರ್ (ಹವಾಗೋಳ)

(4) ಸ್ಟ್ರಾಟೋಸ್ಫಿಯರ್ (ಹವಾಗೋಳಕ್ಕಿಂತ ಮೇಲಿರುವಗೋಳ)

92. ಲೂನಿ ನದಿಯ ಮೂಲವು ಇರುವುದು ಇಲ್ಲಿ

(1) ಅರಾವಳಿ ಶ್ರೇಣಿ

(2) ಸಾತ್ಪುರ ಶ್ರೇಣಿ

(3) ಪೀರ್ ಪಂಜಲ್ ಶ್ರೇಣಿ

(4) ಬೃಹತ್ ಹಿಮಾಲಯ ಶ್ರೇಣಿ

93. ಈ ಮುಂದಿನ ಯಾವ ಗಿಡ / ಗಳು ತಳಿವಿಜ್ಞಾನದ ಪ್ರಕಾರ ಮಾರ್ಪಾಡಾದ ಸಸ್ಯಗಳು ?

A. ಬಿಟಿ ಹತ್ತಿ

B. ಬಿಟಿ ಬದನೆ

C. ಫ್ಲೇವರ್ ಸೇವರ್ ಟಮೋಟೋ

D. ರೌಂಡಪ್ ರೆಡಿ ಸೋಯಾಬೀನ್

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸಂಕೇತಗಳ ಮೂಲಕ ಸರಿಯಾದ ಉತ್ತರವನ್ನು ಆರಿಸಿ :

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) A, B, C ಮತ್ತು D

www.shikarat.com

94. "ಜೀವಿಗಳ ಉಗಮ" (Origin of Species) ಎಂಬ ಪ್ರಸ್ತಕವನ್ನು ಬರೆದವರು

(1) ಎರಾಸ್ಮಸ್

(2) ಚಾರ್ಲ್ಸ್ ಡಾರ್ವಿನ್

(3) ಥಾಮಸ ಹೆನ್ರಿ ಹಕ್ಸ್‌ಲೇ

(4) ಜೀನ್-ಬಾಪ್ಟಿಸ್ಟ್ ಲೆಮಾರ್ಕ್

95. ಈ ಮುಂದಿನ ಅನಿಲಗಳನ್ನು ಪರಿಶೀಲಿಸಿ :

A. ಜಲಜನಕ

B. ಆಮ್ಲಜನಕ

C. ಕ್ಲೋರಿನ್

D. ಇಂಗಾಲದ ಡೈಆಕ್ಸೈಡ್

ಯಾವ ಅನಿಲ/ಅನಿಲಗಳನ್ನು ರೋಗಾಣುನಾಶಕವಾಗಿ ಬಳಸಲಾಗುತ್ತದೆ ?

(1) A ಮಾತ್ರ

(2) A ಮತ್ತು B ಮಾತ್ರ

(3) B ಮತ್ತು C ಮಾತ್ರ

(4) C ಮಾತ್ರ

96. ಲೋಕಸಭೆಗೆ ಆಯ್ಕೆ ಯಾಗಲು ಬಯಸುವ ಅಭ್ಯರ್ಥಿಗೆ ಇರಬೇಕಾದ ಕನಿಷ್ಠ ವಯೋಮಾನ ಎಷ್ಟು ?

(1) 18 ವರ್ಷಗಳು

(2) 21 ವರ್ಷಗಳು

(3) 25 ವರ್ಷಗಳು

(4) 30 ವರ್ಷಗಳು

97. ರಾಜ್ಯಸಭೆಗೆ ಲೋಕಸಭೆಗಿಂತ ಅಧಿಕ ಅಧಿಕಾ ಇರುವುದು ಈ ಸಂದರ್ಭದಲ್ಲಿ

(1) ಹಣ ಮಸೂದೆ

(2) ಹಣಕಾಸೇತರ ಮಸೂದೆ

(3) ನೂತನ ಅಖಿಲ ಭಾರತ ಸೇವೆಗಳ ಸ್ಥಾಪನೆ

(4) ಈ ಯಾವುವೂ ಅಲ್ಲ

98. ಸಂವಿಧಾನದ 60 ನೇ ಕಲಮಿನ ಮೇರೆಗೆ ರಾಜ್ಯ ಸ ನಿಗದಿಪಡಿಸಲಾಗಿರುವ ಸದಸ್ಯರ ಸಂಖ್ಯೆ

(1) 210

(2) 220

(3) 230

(4) 250

99. ಅಲ್ಲಾವುದ್ದೀನ ಹಸನ್ ಬಹಮನ್ ಷಾ ನ ಪ್ರಧಾ ಯಾರು ?

(1) ಮಾಲಿಕ್-ಉಲ್-ಮುಲ್ಕ್

(2) ಮಹಮದ್ ಗವಾನ್

(3) ಮಾಲಿಕ್ ಸೈಫುದ್ದೀನ್ ಘೋರಿ

(4) ಇಸ್ಮಾಯಿಲ್ ಷಾ ಮುಖ್

100. ಕೆಳಗಿನವರಲ್ಲಿ ನೌರಸಪುರ ನಗರವನ್ನು ಸ್ಥಾಪಿಸಿದ ಬಿಜಾಪುರದ ಆದಿಲ್ ಷಾಹಿ ಗಳಲ್ಲಿನ ಸುಲ್ತಾನ ಯಾರು ?

(1) ಯೂಸುಫ್ ಅದಿಲ್ ಷಾ

(2) ಅಲಿ ಆದಿಲ್ ಷಾ

(3) ಇಬ್ರಾಹಿಮ ಅದಿಲ್ ಷಾ I

(4) ಇಬ್ರಾಹಿಂ ಅದಿಲ್ ಷಾ II

www.shikarat.com